**ಕೇಶವರೆಡ್ಡಿ ಹಂದ್ರಾಳ**

ಕಲೆ: ಎಸ್.ವಿ. ಹೂಗಾರ



# ಆನಂದ ವಿಹಾರ್

ವಾರದ ಕೊನೆಯ ದಿನ ಶನಿವಾರವಾದ್ದರಿಂದ ಫ್ಯಾಕ್ಟರಿಯಲ್ಲಿ ಅಂದು ವಿಪರೀತ ಕೆಲಸವಿತ್ತು. ರಾತ್ರಿ ಎಂಟು ಗಂಟೆಗೆ ರೂಮಿಗೆ ಬಂದಾಗ ರಾಮ್ ಲಾಲ್ ಸ್ವಲ್ಪ ಆಯಾಸಗೊಂಡವನಂತೆ ಕಾಣುತ್ತಿದ್ದ. ತಮ್ಮ ತಾರಾನಾಥ ಚಪಾತಿ, ಆಲೂ ಮಟರ್ ಸಬ್ಜಿ ಮಾಡಿ ಹೊರಗೆಲ್ಲೋ ತಿರುಗಾಡಿಕೊಂಡು ಬರಲು ಹೋಗಿದ್ದ. ರಾಮ್ ಲಾಲ್ ದೂರದ ಹಳ್ಳಿಯಿಂದ ದಿಲ್ಲಿಗೆ ಕೆಲಸಕ್ಕೆಂದು ಬಂದು ಒಂದೂವರೆ ವರ್ಷವಾಗಿದೆ. ಇದಕ್ಕೂ ಮೊದಲು ಉದ್ಯೋಗ ಅರಸಿಕೊಂಡು ಮುಂಬಯಿಗೆ ಹೋಗಿ ಮೂರು ತಿಂಗಳೂ ಅಲ್ಲಿ ಇರಲಾಗದೆ ಊರಿಗೆ ವಾಪಸ್ಸು ಬಂದಿದ್ದ. ಮೊದಲಿನಿಂದಲೂ ದಿಲ್ಲಿಯಲ್ಲಿ ಹೋಟೆಲೊಂದರಲ್ಲಿ ಕೆಲಸ ಮಾಡುತ್ತಿದ್ದ ಸೋಮದೇವ ಊರಿಗೊಮ್ಮೆ ಬಂದಿದ್ದಾಗ